ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:63ಕ್ಕೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಉತ್ತರ.

*****

ಸೂಚನೆ:
ಸಿಂಧನೂರಿನ ಹೃದಯ ಭಾಗದಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಒಡೆತನದ ಗೋದಾಮು ಸುಮಾರು 40 ವರ್ಷಗಳ ಹಿಂದೆ ನಿರ್ಮಾಣವಾಗಿದ್ದು, ಈ ಹಿಂದೆ ಪಡಿತರ ಚೀಟಿದಾರರಿಗೆ ಸರ್ಕಾರದಿಂದ ನೀಡಲಾಗುತ್ತಿದ್ದ ಆಹಾರ ಪದಾರ್ಥಗಳನ್ನು ಸಂರಕ್ಷಿಸಿಡುವ ಉದ್ದೇಶದಿಂದ ನಿರ್ಮಾಣ ಮಾಡಲಾಗಿತ್ತು. ಆದರೆ ಪ್ರಸ್ತುತ ಶಿಥಿಲಾವಸ್ಥೆಯಲ್ಲಿರುವ ಸದರಿ ಗೋದಾಮು ಹಲವಾರು ವರ್ಷಗಳಿಂದ ಖಾಲಿಯಿದ್ದು, ಹಂದಿಗಳ ಹಾಗೂ ಜನರ ಬಯಲು ಶೌಚಾಲಯವಾಗಿ ಮಾರ್ಪಟ್ಟಿದೆ. ಆದುದರಿಂದ ಸದರಿ ಜಾಗವನ್ನು ಸರ್ಕಾರದಿಂದ ಸಂರಕ್ಷಣೆ ಮಾಡಿ ಸರ್ಕಾರದ ಇನ್ನಿತರೆ ಅಗತ್ಯ ಕಟ್ಟಡಗಳ ನಿರ್ಮಾಣಕ್ಕೆ ಬಳಕೆ ಮಾಡಿಕೊಳ್ಳುವ ಕುರಿತು ಮಾನ್ಯ ಆಹಾರ ಸಚಿವರ ಗಮನ ಸಳೆಯ ಬಯಸುತ್ತೇನೆ.

**ಉತ್ತರ:**

ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣದ ಹೃದಯ ಭಾಗದಲ್ಲಿ ಇರುವ ಆಹಾರ ಇಲಾಖೆಯ ಸ್ವತ್ತಿನಲ್ಲಿ ನಿರ್ಮಿಸಲಾಗಿದ್ದ ಗೋದಾಮುಗಳನ್ನು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವು ಆಹಾರಧಾನ್ಯಗಳನ್ನು ಸಂಗ್ರಹಿಸಲು ಬಳಸಿಕೊಳ್ಳಲಾಗುತ್ತಿತ್ತು, ತದನಂತರ 2010ನೇ ಸಾಲಿನಲ್ಲಿ ನಿಗಮಕ್ಕೆ ಹಸ್ತಾಂತರಿಸಲಾಗಿದ್ದು, ಸಿಂಧನೂರು ನಗರಸಭೆಯಲ್ಲಿ ನಿಗಮದ ಹೆಸರಿಗೆ ಖಾತೆ ಮುಂತಾದ ದಾಖಲೆಗಳು ವರ್ಗಾಯಿಸಲ್ಪಟ್ಟಿರುತ್ತದೆ ಹಾಗೂ ನಗರಸಭೆ ನಿಗಧಿಪಡಿಸಿರುವ ಸ್ವತ್ತಿನ ತೆರಿಗೆಯನ್ನು ಕಾಲಕಾಲಕ್ಕೆ ಪಾವತಿಸಲಾಗಿದೆ.

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗೆ ವೈಜ್ಞಾನಿಕವಾಗಿ ಆಹಾರ ಧಾನ್ಯಗಳನ್ನು ಶೇಖರಿಸಲು ಸೂಕ್ತವಾಗಿರದ ಕಾರಣ ಸದರಿ ಗೋದಾಮುಗಳನ್ನು ದುರಸ್ತಿ ಮಾಡಿಸಲು ಸಹ ಸೂಕ್ತವಾಗಿರದ ಕಾರಣ ಸದರಿ ಗೋದಾಮುಗಳನ್ನು ತೆರವುಗೊಳಿಸಿ, ವೈಜ್ಞಾನಿಕವಾಗಿ ಗೋದಾಮುಗಳನ್ನು ನಿರ್ಮಾಣ ಮಾಡಲು ನೀಲನಕ್ಷೆಯನ್ನು ಸಿದ್ಧಪಡಿಸಿ, ನಿಗಮದ ನಿರ್ದೇಶಕ ಮಂಡಳಿಯ ಅನುಮೋದನೆಗೆ ಮಂಡಿಸಲು ಪೂರ್ವ ಸಿದ್ಧತೆಗಳನ್ನು ಕೈಗೊಳ್ಳಲಾಗಿರುತ್ತದೆ.

ಸಿಂಧನೂರಿನ ಹೃದಯ ಭಾಗದಲ್ಲಿರುವ ನಿಗಮದ ಸ್ವತ್ತನ್ನು ಮೂರು ದಿಕ್ಕಿನಲ್ಲಿಯೂ ಕೆಲವು ಭಾಗದಲ್ಲಿ ಖಾಸಗಿ ವ್ಯಕ್ತಿಗಳು ಅತಿಕ್ರಮಣ ಮಾಡಿದ್ದರಿಂದ ವೈಜ್ಞಾನಿಕ ಗೋದಾಮು ನಿರ್ಮಾಣ ಮಾಡಲು ತಡವಾಗಿರುತ್ತದೆ. ಒತ್ತುವರಿ ತೆರವುಗೊಳಿಸುವ ಸಂಬಂಧ ಸಿಂಧನೂರಿನ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯಲ್ಲಿರುತ್ತದೆ. 2025ನೇ ಸಾಲಿನ ಮೊದಲ ಭಾಗದಲ್ಲಿ

ಅತಿಕ್ರಮಣವನ್ನು ತೆರವುಗೊಳಿಸಿ, ತಂತಿಬೇಲಿಯನ್ನು ನಿರ್ಮಿಸಿ, ಅನಧಿಕೃತ ವ್ಯಕ್ತಿಗಳು ಪ್ರವೇಶಿಸುವುದನ್ನು ನಿರ್ಭಂಧಿಸಲಾಗಿದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದಂತಹ ಅನ್ನಭಾಗ್ಯ ಮತ್ತು ಮಧ್ಯಾಹ್ನ ಉಪಹಾರ ಯೋಜನೆಯನ್ನು ಯಶಸ್ವಿಯಾಗಿ ಅನುವಾಗುವಂತೆ ಅಕ್ಕಿ, ಬಿಳಿಜೋಳವನ್ನು ಕಾರ್ಯಗತಗೊಳಿಸಲು ಮತ್ತು ಗೋದಾಮುಗಳಲ್ಲಿ ಸಂಗ್ರಹಿಸುವಂತಹ ಪ್ರಮುಖ ಕಾರ್ಯದಲ್ಲಿ ತೊಡಗಿದ್ದು, ಸಿಂಧನೂರು ಪಟ್ಟಣದ ಹೃದಯ ಭಾಗದಲ್ಲಿರುವ ಸ್ವತ್ತನ್ನು ನಿಗಮವನ್ನು ಹೊರತುಪಡಿಸಿ, ಬೇರೆ ಉದ್ದೇಶದ ಕಟ್ಟಡಗಳಿಗೆ ಅವಕಾಶ ಮಾಡಿಕೊಟ್ಟಲ್ಲಿ ನಿಗಮವು ತೀವ್ರ ನಷ್ಟಕ್ಕೆ ಒಳಗಾಗುವುದಲ್ಲದೇ ನಿಗಮಕ್ಕ ಮತ್ತೇ ಅಂತಹ ಆಯಕಟ್ಟಿನ ಆಸ್ತಿಯು ಗೋದಾಮು ನಿರ್ಮಿಸಲು ದೊರೆಯುವುದಿಲ್ಲ.

ಸದರಿ ಸ್ವತ್ತಿನಲ್ಲಿ ವೈಜ್ಞಾನಿಕ ಗೋದಾಮು ನಿರ್ಮಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಒತ್ತುವರಿ ತೆರವುಗೊಳಿಸುವ ಸಂಬಂಧ ಒತ್ತುವರಿದಾರರು ಸಕ್ಷಮ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣಗಳು ಇತ್ಯರ್ಥವಾದ ಕೂಡಲೇ ಬಾಕಿ ಇರುವ ಒತ್ತುವರಿಯನ್ನು ತೆರವುಗೊಳಿಸಿ, ಸಂಪೂರ್ಣವಾಗಿ ನಿಗಮವು ಸ್ವತ್ತನ್ನು ಬಳಸಿಕೊಳ್ಳುತ್ತದೆ.

ಆನಾಸ 161 ಆರ್‌ಪಿಆರ್ 2025

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು